



# ನಾ....ಲಗೆ!

**ಮಾ**ಸ್ಕೋದಲ್ಲಿ ಜನಿಸಿದ ನಿಕ್ ಅಫಾನಾಸಿವ್ ಈಗ ಕ್ಯಾಲಿಫೋರ್ನಿಯಾದಲ್ಲಿ ನೆಲೆಸಿದ್ದಾನೆ. ಈತನ ನಾಲಗೆಯ ಉದ್ದ ಮತ್ತು ಅವತಾರ ನೋಡಿ ಜನ ಬೆಚ್ಚಿ ಬೀಳುತ್ತಾರಂತೆ. ಮುಚ್ಚಿದ ಮೇಲಿನ ತುಟಿಯ ಮಧ್ಯದಿಂದ ಈತನ ನಾಲಿಗೆಯ ತುದಿವರೆಗಿನ ಉದ್ದ ಬರೋಬ್ಬರಿ 3.5 ಇಂಚು!

ಇದು ಗಿನ್ನಿಸ್ ರೆಕಾರ್ಡ್ ಆಗಿರುವ ಅತೀ ಉದ್ದನೆಯ ನಾಲಿಗೆಗಿಂತ ಕೇವಲ 0.36 ಇಂಚು ಕಡಿಮೆ! ಈತ ತನ್ನ ನಾಲಿಗೆಯಿಂದ ಮೂಗಿನ ಹೊರಳೆಗಳನ್ನು ಕ್ಲೀನ್ ಮಾಡಿಕೊಳ್ಳಬಲ್ಲ. ಮೊಣಕೈ ತುದಿಗೆ ನಾಲಿಗೆಯನ್ನು ಮುಟ್ಟಿಸಬಲ್ಲ. ಕೈಯಿಂದ ನಾಲಿಗೆಯನ್ನು ಬಟ್ಟೆ ತಿರಿಚಿದ ಹಾಗೆ ತಿರುಚಬಲ್ಲ. ಹೀಗೆ ನಿಕ್ ಅಫಾನಾಸಿವ್ ಸಾಮಾನ್ಯರಿಗೆ ಅಸಾಧ್ಯವೆನಿಸುವ ಅನೇಕ ಟ್ರಿಕ್‌ಗಳನ್ನು ತನ್ನ ನಾಲಿಗೆಯಿಂದ ಮಾಡಿ ತೋರಿಸಿ ಅಚ್ಚರಿಯನ್ನುಂಟು ಮಾಡುತ್ತಾನಂತೆ.

■ ವಿದ್ಯಾ ಹಾಲಭಾವಿ



